**ಓ ಎಸ್ ನಂಃ 40-2022**
**ಪಿ ಡಬ್ಲ್ಯೂ ಃ 2**

**ದಿಃ 08-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಹೆಚ್. ಎನ್. ಎಸ್. ವಕೀಲರಿಂದ**

4. ನಾನು ಮಾಗಡಿಯ ಹತ್ತಿರ ಜುಟ್ಟನಹಳ್ಳಿಯ ನಿವಾಸಿಯಾಗಿರುತ್ತೇನೆ. ನಾನು ಸದರಿ ಊರಿನಲ್ಲಿ 50 ವರ್ಷಗಳಿಂದ ವಾಸವಾಗಿರುತ್ತೇನೆ. ನಾನು 3ನೇ ತರಗತಿಯವರೆಗೂ ವ್ಯಾಸಂಗ ಮಾಡಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ನಾನು ಈ ಹಿಂದೆ ನ್ಯಾಯಾಲಯಕ್ಕೆ ಬಂದು ಯಾವುದೇ ದಾವೆಯಲ್ಲಿ ಸಾಕ್ಷಿ ಹೇಳಿರುವುದಿಲ್ಲ.

5. ಲಕ್ಷ್ಮಮ್ಮರವರು ಅವರ ಜೀವನಾಂಶಕ್ಕೆ ಏನಾದರೂ ಕೊಡಿ ಎಂದು ದಾವೆಯನ್ನು ಹೂಡಿರುತ್ತಾರೆ. ಪ್ರಸ್ತುತ ದಾವೆಯಲ್ಲಿ ಏನು ಹೇಳಲಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಪ್ರಸ್ತುತ ದಾವೆಯಲ್ಲಿ ವಾದಿಗಳು ಭಾಗ ಕೊಡಲು ಕೇಳಿರುತ್ತಾರೆ. ಸದರಿ ದಾವೆಯನ್ನು 3 ಆಸ್ತಿಗಳ ಮೇಲೆ ಹಾಕಿರುತ್ತಾರೆ. ನನಗೆ ಸದರಿ ಆಸ್ತಿಗಳ ಚಕ್ಕುಬಂದಿ ಮತ್ತು ವಿಸ್ತೀರ್ಣ ಹೇಳಲು ಆಗುವುದಿಲ್ಲ. ಖಾತೆ ಪಹಣಿಗಳು ಯಾರ ಹೆಸರಿನಲ್ಲಿ ಇರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ. ನನಗೆ 1ನೇ ಪ್ರತಿವಾದಿಗೆ ಸೇರಿದ ಆಸ್ತಿಗಳು ಯಾವುದು ಎಂದು ನನಗೆ ಗೊತ್ತಿರುವುದಿಲ್ಲ. 1ನೇ ಪ್ರತಿವಾದಿಯವರ ಕುಟುಂಬಕ್ಕೆ ಮೊದಲು ಎಷ್ಟು ಆಸ್ತಿ ಇತ್ತು ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯ ಕುಟುಂಬಸ್ಥರು ಎಷ್ಟು ಆಸ್ತಿಗಳನ್ನು ಮಾರಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

6. ನಾನು 1ನೇ ಪ್ರತಿವಾದಿಗೆ ಸೇರಿದ ಯಾವುದೇ ಆಸ್ತಿಗಳನ್ನು ಆಜು ಬಾಜುದಾರನು ಆಗಿರುವುದಿಲ್ಲ, ಸಾಕ್ಷಿಯು ಮುಂದುವರೆದು 1 ಆಸ್ತಿ ಬಿಟ್ಟು ಆದ ಮೇಲೆ ನನ್ನ ಆಸ್ತಿಯು ಇರುತ್ತದೆ ಎಂದು ನುಡಿಯುತ್ತಾರೆ.

7. ದಾವಾ ಐಟಂ 3 ರ ಚಕ್ಕುಬಂದಿಯಲ್ಲಿ ನಾನು ಉತ್ತರ ಮತ್ತು ದಕ್ಷಿಣ ಮತ್ತು ಇರುತ್ತೇನೆ ಎಂದರೆ ಸರಿ. ನಾನು 1 ನೇ ಪ್ರತಿವಾದಿಯವರ ಜೊತೆ ಚೆನ್ನಾಗಿರುತೇನೆ.

ಓ ಎಸ್ ನಂಃ 40-2022

ಪಿ ಡಬ್ಲ್ಯೂ ಃ 2

8. ಸ. ನಂ. 20/2 ರಲ್ಲಿ 1 ಹಲಸಿನ ಮರ ಇರುತ್ತದೆ ಎಂದರೆ ಸರಿ. ಅದು ನನಗೆ ಸೇರಿರುತ್ತದೆ ಎಂದು ನುಡಿಯುತ್ತಾರೆ. ಸ. ನಂ. 20/2 ನನಗೆ ಸೇರಿದ ಜಮೀನು ಅಲ್ಲ ಎಂದರೆ ನನಗೆ ಸೇರಿರುತ್ತದೆ ಎಂದು ನುಡಿಯುತ್ತಾರೆ. ಸ. ನಂ. 20/2 ರ ಪಹಣಿಯಲ್ಲಿ ನನ್ನ ಹೆಸರು ಖಾತೆದಾರರಾಗಿ ಇರುವುದಿಲ್ಲ ಎಂದರೆ ಇರುತ್ತದೆ. ಸ. ನಂ. 20/2 ರಲ್ಲಿ ಇರುವ ಹಲಸಿನ ಮರಕ್ಕೆ ವಿಚಾರವಾಗಿ ನಮ್ಮ ಮಧ್ಯೆ ತಕರಾರು ಇತ್ತು ಎಂದರೆ ಸಾಕ್ಷಿ ನಿಜ ಸದರಿ ಜಾಗವನ್ನು ಸರ್ವೆ ಮಾಡಿದ ನಂತರ ಹಲಸಿನ ಮರ ಇರುವ ಜಾಗ ನನ್ನದು ಎಂದು ಹೇಳಲಾಗಿತ್ತು ನಾನು ಈಗ ಹಲಸಿನ ಮರವನ್ನು ಬಳಸುತ್ತಿದ್ದೇನೆ. ನನಗೂ ಮತ್ತು ಪ್ರತಿವಾದಿ 1 ರವರಿಗೆ ಹಲಸಿನ ಮರದ ವಿಚಾರವಾಗಿ ತಕರಾರು ಇತ್ತು ಈ ದಿನವೂ ಕೂಡ ಹಲಸಿನ ಮರಗಳು ಜಯಮ್ಮ ನವರ ಸ್ವಾಧೀನದಲ್ಲಿರುತ್ತದೆ ಎಂದರೆ ಸರಿ. ಹಲಸಿನ ಮರದ ವಿಚಾರವಾಗಿ ನನಗೂ ಮತ್ತು ಜಯಮ್ಮನವರಿಗೆ ವೈಶಮ್ಯ ಇದ್ದ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದೇನೆ ಎಂದರೆ ಸರಿಯಲ್ಲ.

9. ಲಕ್ಷ್ಮಮ್ಮ ನವರು ಕಲ್ಲಹಟ್ಟಿಪಾಳ್ಯ ವಾಸಿ ಆಗಿರುತ್ತಾರೆ ಎಂದರೆ ಸರಿ. ಅವರು 4 – 5 ವರ್ಷಗಳಿಂದ ಅಲ್ಲಿ ವಾಸ ಮಾಡುತ್ತಿದ್ದಾರೆ. ವಾದಿಗೆ ಸರ್ಕಾರದವರು 1 ನಿವೇಶನ ನೀಡಿ ಮನೆ ಕಟ್ಟಲು ಅನುಕೂಲ ಮಾಡಿಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ವಾದಿ 50 ವರ್ಷಗಳಿಂದ ಸದರಿ ಗ್ರಾಮದಲ್ಲಿ ವಾಸಮಾಡುತ್ತಿದ್ದಾರೆ ಎಂದರೆ ಸುಳ್ಳು . ವಾದಿಯೇ 25 ವರ್ಷಗಳಿಂದ ಅಲ್ಲಿ ವಾಸ ಮಾಡುತ್ತಿದ್ದಾರೆ ಎಂದು ಒಪ್ಪಿಕೊಂಡಿರುತ್ತಾರೆ ಎಂದರೆ ಸುಳ್ಳು .

10. 1ನೇ ಪ್ರತಿವಾದಿಯವರ ಗಂಡನ ಅಣ್ಣ ಬುದ್ಧಿ ಮಾಂದ್ಯ ಆಗಿದ್ದರು ಎಂದರೆ ಸರಿ. ಅವರಿಗೆ ಪ್ರಪಂಚ ಜ್ಞಾನ ಇರಲಿಲ್ಲ ಎಂದರೆ ಸರಿ. ನಾನು ವಾದಿ ಮತ್ತು ಅವರ ಗಂಡ ನಂಜುಂಡಯ್ಯನವರ ಮದುವೆಗೆ ಹೋಗಿರುತ್ತೇನೆ. 1ನೇ ಪ್ರತಿವಾದಿಯ ಗಂಡನ ಅಣ್ಣ ನಂಜುಂಡಯ್ಯನವರು ಬುದ್ಧಿ ಮಾಂದ್ಯ ಆದ ಕಾರಣ

ಅವರು ಮದುವೆ ಆಗಿರಲಿಲ್ಲ ಎಂದರೆ ಸುಳ್ಳು. ನಾರಾಯಣಪ್ಪನವರ ಅಣ್ಣ ನಂಜುಂಡಯ್ಯನವರು ತೀರಿಕೊಂಡು 60 ವರ್ಷಗಳು ಆಗಿರುತ್ತದೆ ಎಂದರೆ ಸ್ವಲ್ಪ ಕಮ್ಮಿ ಆಗಿರುತ್ತದೆ. ನಂಜುಂಡಯ್ಯನವರು ತೀರಿಕೊಂಡು 35 ವರ್ಷಗಳು ಆಗಿರಬಹುದು.

11. ನಂಜುಂಡಯ್ಯ ಮತ್ತು ಲಕ್ಷ್ಮಮ್ಮ ನವರ ಮದುವೆಯ ಆಮಂತ್ರಣ ಪತ್ರಿಕೆಯನ್ನು ನೋಡಿರುತ್ತೀರ ಎಂದರೆ ಆ ದಿನಗಳಲ್ಲಿ ಅದನ್ನು ಮುದ್ರಣ ಮಾಡುತ್ತಿರಲಿಲ್ಲ ಎಂದು ಹೇಳುತ್ತಾರೆ. ನಾನು ನಂಜುಂಡಯ್ಯ ಮತ್ತು ಲಕ್ಷ್ಮಮ್ಮ ನವರ ಹೆಸರಿನ ರೇಷನ ಕಾರ್ಡ ನೋಡಿರುವುದಿಲ್ಲ. ನನ್ನ ಹತ್ತಿರ ಅವರು ಮದುವೆ ಆಗಿರುತ್ತಾರೆ ಎಂದು ಹೇಳಲು ಯಾವುದೇ ದಾಖಲಾತಿಗಳು ಇರುವುದಿಲ್ಲ.

12. ನಾರಾಯಣಪ್ಪನವರ ಕುಟುಂಬದ ಆಗು ಹೋಗುಗಳನ್ನು ನಾನು ನೋಡಿರುವುದಿಲ್ಲ. ನಾನು ವಾದಿಗಳಿಗೆ ಮತ್ತು ಪ್ರತಿವಾದಿಗಳಿಗೆ ಯಾವ ರೀತಿ ಸಂಬಂಧ ಎಂದು ಹೇಳಲು ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನಂಜುಂಡಯ್ಯನವರ ಹೆಂಡತಿ ಲಕ್ಷ್ಮಮ್ಮ ನವರು ಅಲ್ಲ ಎಂದರೆ ಸರಿಯಲ್ಲ. ನಾರಾಯಣಪ್ಪನವರ ಕುಟುಂಬದಲ್ಲಿ ವಿಭಾಗ ಆಗಿರುತ್ತದೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ ಎಂದರೆ ಗೊತ್ತಿಲ್ಲ ಎಂದು ಹೇಳಿ ನಂತರ ವಿಭಾಗವಾಗಿರುವುದಿಲ್ಲ ಎಂದು ನುಡಿಯುತ್ತಾರೆ.

13. ವಾದಿಗಳು ಮತ್ತು ಪ್ರತಿವಾದಿಗಳು ಜಂಟಿ ಸ್ವಾಧೀನದಲ್ಲಿ ಇರುತ್ತಾರೆ ಎಂದು ನಾನು ಪ್ರಮಾಣ ಪತ್ರದಲ್ಲಿ ಹೇಳಿದ್ದು ಅದಕ್ಕೆ ಅನುಗುಣವಾಗಿ ನಾನು ಯಾವುದೇ ದಾಖಲಾತಿಯನ್ನು ಹಾಜರು ಪಡಿಸಿರುವುದಿಲ್ಲ. ದಾವಾ ಸ್ವತ್ತುಗಳು ಮೂಲತಃ ನಾರಾಯಣಪ್ಪನವರ ತಂದೆಯ ಸ್ವಯಾರ್ಜಿತ ಸ್ವತ್ತುಗಳು ಆಗಿರುತ್ತವೆ.

14. ಪ್ರತಿವಾದಿ 1 ರವರಿಗೆ ಅವರ ಮಾವನವರು ಐಟಂ ನಂ. 1 ರಲ್ಲಿ 2 ಎಕರೆ ಜಮೀನಿಗೆ ಸಂಬಂಧಪಟ್ಟಂತೆ ಕ್ರಯಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿ 1 ರವರು ಕ್ರಯ ಪಡೆದ ನಂತರ ಸ್ವಾಧೀನದಲ್ಲಿದ್ದು ಬಾಂಕಿನಲ್ಲಿ ಸಾಲ

ಓ ಎಸ್ ನಂಃ 40-2022
ಪಿ ಡಬ್ಲ್ಯೂ ಃ 2

ಪಡೆದಿರುತ್ತಾರೆ ಎಂದರೆ ಇರಬಹುದು. ನಾನು ಪ್ರತಿವಾದಿಗಳ ಮೇಲೆ ಇರುವ ವೈಶಮ್ಯದಿಂದ ಮತ್ತು ಆಮಿಷಕ್ಕೆ ಒಳಗಾಗಿ ವಾದಿಗೆ ಜಮೀನು ಕೊಡಿಸಿ ಜಮೀನು ಹೊಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಗಂಡ ನಂಜುಂಡಯ್ಯನವರನ್ನು ಎಲ್ಲಿ ಮಣ್ಣು ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಲಕ್ಷ್ಮಮ್ಮನವರಿಗೂ ಮತ್ತು ಪ್ರತಿವಾದಿಗಳಿಗೂ ಯಾವುದೇ ಮಾತು ಕತೆ ಇರುವುದಿಲ್ಲ ಎಂದರೆ ಇರುತ್ತದೆ. ವಾದಿ ಮತ್ತು ಪ್ರತಿವಾದಿಗಳು ಬೇರೆ ಊರಿನಲ್ಲಿ ವಾಸ ಮಾಡುತ್ತಿರುವುದಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿಯು ಜಯಮ್ಮ ಚಿಕ್ಕ ಮಗನ ಹೆಂಡತಿ ಮತ್ತು ಲಕ್ಷ್ಮಮ್ಮ ದೊಡ್ಡ ಮಗನ ಹೆಂಡತಿ ಎಂದು ಹೇಳುತ್ತಾರೆ. ನಾನು ಸದರಿ ಸಂಬಂಧದ ಕುರಿತು ಯಾವುದೇ ದಾಖಲಾತಿಗಳನ್ನು ನೋಡಿರುವುದಿಲ್ಲ ಎಂದರೆ ಸರಿ. ಹಲಸಿನ ಮರದ ವಿಚಾರವಾಗಿ ನನಗೂ ಮತ್ತು ಪ್ರತಿವಾದಿಗಳಿಗೆ ವೈಶಮ್ಯ ಇದ್ದ ಕಾರಣ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**